ಗುರುವೋ ಅವನೇ ಇಷ್ಟದೇವ. ಗುರುವು ಭಗವಂತನೆಡೆಗೆ ಕೊಂಡೊಯ್ಯುವ ದಾರ" (*ವಚನವೇದ*, ಭಾಗ ೧, ಪು. ೧೩೭)

ಇದರರ್ಥ, ನಿಜವಾದ ಗುರುವೆಂದರೆ ಇಷ್ಟದೇವತೆಯ ಆವಿರ್ಭಾವವೆಂದೇ ನಾವು ತಿಳಿದುಕೊಳ್ಳಬೇಕು. ಭಗವಂತನ ಅನುಗ್ರಹದಿಂದಲೇ ಗುರು ದೊರಕುತ್ತಾನೆ. ಯಾವಾಗ ಇಷ್ಟ ದೇವತೆಯ ದರ್ಶನವಾಗುವುದೋ ಆಗ ತಿಳಿದು ಬರುವುದು, ತನ್ನ ಗುರು ಆತನೇ ಆಗಿದ್ದಾನೆ ಎಂದು. ಎಲ್ಲಿ ಗುರು ಮತ್ತು ಭಗವಂತ ಒಂದಾಗುವರೋ, ಆಗ ಶಿಷ್ಯನಿಗೆ ಅರ್ಥವಾಗುವುದು, ಭಗವಂತನ ಕೃಪೆ ತನಗೆ ಹರಿದು ಬರುವುದು ಗುರುವಿನ ಮೂಲಕ ಎಂದು. ತನ್ನ ಗುರು ಎಂಥವನೇ ಆಗಿರಲಿ, ಅದೆಂಥ ಪಾಪಕೃತ್ಯವನ್ನೇ ಮಾಡಿರಲಿ, ತನ್ನ ಪಾಲಿಗೆ ಅವನೇ ಪರದೈವ ವೆಂಬ ಭಾವನೆ ಸರ್ವದಾ ಇರಬೇಕು. ಇಂತಹ ಗುರುಭಕ್ತಿ, ನಿಷ್ಠೆಗಳಿಲ್ಲದೆ ಆಧ್ಯಾತ್ಮಿಕ ಪ್ರಗತಿ ಸಾಧ್ಯವಿಲ್ಲವೆಂದು ಶ್ರೀರಾಮ ಕೃಷ್ಣರು ಸ್ಪಷ್ಟವಾಗಿ ಹೇಳುತ್ತಾರೆ.

**ಗುರುವಿನ ಪಾರಮ್ಯ :** ಶ್ರೀಮಾತೆ ಶಾರದಾದೇವಿಯವರ ಸೇವಕ ನಾಗಿದ್ದ ಬ್ರಹ್ಮಚಾರಿ ರಾಸಬಿಹಾರಿ ಅವರಿಗೆ ಒಂದು ಪ್ರಶ್ನೆ ಕೇಳುತ್ತಾರೆ, "ಅಮ್ಮಾ, ನಾಮರೂಪದ ಹೊರತಾಗಿ ಬೇರೇನೂ ಇಲ್ಲ. ಆದ್ದರಿಂದ ಅಂತಿಮವಾಗಿ ಈಶ್ವರ ಅಂತೇನೂ ಇಲ್ಲ ಎನ್ನುತ್ತಾರೆ". (ಅವರ ಭಾವನೆ ಏನಾಗಿತ್ತೆಂದರೆ, ಅಂತಿಮವಾಗಿ ಶ್ರೀರಾಮಕೃಷ್ಣರು, ಶ್ರೀಮಾತೆ ಇವೆಲ್ಲವೂ ಮಿಥ್ಯೆಯೇ ಎಂದು.) ಅದಕ್ಕೆ ಶ್ರೀಮಾತೆ ಉತ್ತರಿಸುತ್ತಾರೆ, "ನರೇನ್ (ಸ್ವಾಮಿ ವಿವೇಕಾ ನಂದರು) ಹೇಳುತ್ತಿದ್ದ, 'ಅಮ್ಮಾ, ಯಾವ ಜ್ಞಾನ ಗುರುವಿನ ಪಾದಪದ್ಮಗಳಿಂದ ನಮ್ಮನ್ನು ವಿಮುಖಗೊಳಿಸುವುದೋ ಅದು ಅಜ್ಞಾನ. ಗುರುವಿನ ಪಾದಪದ್ಮಗಳಿಂದ ದೂರ ಹೋದರೆ ಜ್ಞಾನಕ್ಕೆ ನೆಲೆಯೆಲ್ಲಿ?' ಅಂತ. ನೀನು ಈ ಅಜ್ಞಾನದ ಕಲಸು ಮೇಲೋಗರವನ್ನು ಬಿಟ್ಟುಬಿಡು. ಭಗವಂತನನ್ನು ಯಾರು ತಿಳಿದುಕೊಳ್ಳಬಲ್ಲರು?" ಇದು ಗುರುವಿನ ವಿಚಾರದಲ್ಲಿ ಅಂತಿಮವಾದ ಮಾತು. ಯಾರು ಗುರುವಿನ ಪಾದಗಳಲ್ಲಿ ತನ್ನನ್ನು ಸಮರ್ಪಿಸಿಕೊಂಡಿರುವನೋ, ಅವನ ಸಮಸ್ತ ಜವಾಬ್ದಾರಿಯನ್ನು ಗುರು ಹೊತ್ತುಕೊಳ್ಳುವನು. ಶಿಷ್ಯಂದಿರನ್ನೆಲ್ಲ ಮುಕ್ತರನ್ನಾಗಿಸದೆ ಗುರುವಿಗೂ ಮುಕ್ತಿಯಿಲ್ಲ. ಅವರೆಲ್ಲರ ಬಂಧ, ಮುಕ್ತಿಗಳಿಗೆ ಗುರುವೇ ಜವಾಬ್ದಾರ. ಅವನು ಶಿಷ್ಯನ ಮುಕ್ತಿಗೆ ಸಕಲ ಪ್ರಯತ್ನವನ್ನೂ ಮಾಡುವನು ಎನ್ನುತ್ತಾರೆ. ಮಂತ್ರದೀಕ್ಷೆ ನೀಡುವ ಮೂಲಕ ಗುರು ತನ್ನ ಶಿಷ್ಯನ ಸರ್ವಸ್ವವನ್ನೂ ಸ್ವೀಕರಿಸುತ್ತಾನೆ; ಶಿಷ್ಯನು ತನ್ನ ಸರ್ವಸ್ವವನ್ನೂ ಗುರುವಿನ ಪಾದಗಳಿಗೆ ಒಪ್ಪಿಸುತ್ತಾನೆ. ಈ ವಿಚಾರವನ್ನು ಸ್ಪಷ್ಟೀಕರಿಸುವ ಕೆಲವು ನಿದರ್ಶನಗಳು ಇಲ್ಲಿವೆ:

ಸ್ವಾಮಿ ವಿವೇಕಾನಂದರ ಶಿಷ್ಯರಾದ ಸ್ವಾಮಿ ಸದಾನಂದರಿಗೆ ಒಂದು ಘಟನೆ ನೆನಪಾಯಿತು: ಸ್ವಾಮೀಜಿ ತಮ್ಮ ಶಿಷ್ಯಂದಿರ ಮುಂದೆ ಸ್ವಾಮಿ ಪ್ರೇಮಾನಂದರಿಗೆ ಹೇಳಿದರಂತೆ– 'ಬಾಬು ರಾಮ್, ಒಂದು ವೇಳೆ ನನ್ನ ಶಿಷ್ಯಂದಿರು ಸಾವಿರ ಸಲ ನರಕಕ್ಕೆ ಹೋದರೆ, ನಾನೂ ಸಾವಿರ ಬಾರಿ ಅವರ ಕೈಹಿಡಿದು ಅಲ್ಲಿಂದ ಮೇಲಕ್ಕೆತ್ತುವೆ. ಇದು ಸತ್ಯವಲ್ಲದೆ ಹೋದರೆ, ಶ್ರೀರಾಮಕೃಷ್ಣರೇ ಮೊದಲಾದವರೂ ಅಸತ್ಯವೆಂದು ತಿಳಿ' ಎಂದರಂತೆ ಸ್ವಾಮೀಜಿ.

ಇನ್ನೊಂದು ಸಂದರ್ಭದಲ್ಲಿ ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದ ವೈಕುಂಠನೆಂಬ ಶಿಷ್ಯನೊಬ್ಬನು ಅವರ ಮುಂದೆ ತನ್ನ ಅಸಹಾಯಕತೆಯನ್ನು ಹೇಳಿಕೊಂಡ. ಮಂತ್ರಜಪ ಮಾಡಲು ತನ್ನಿಂದ ಸಾಧ್ಯವಾಗುತ್ತಿಲ್ಲ; ಶಿಷ್ಯ ಮಂತ್ರಜಪ ಮಾಡದಿದ್ದರೆ ಗುರು ಕಷ್ಟವನ್ನು ಅನುಭವಿಸಬೇಕು ಅನ್ನುತ್ತಾರೆ. ಆದ್ದರಿಂದ ಮಂತ್ರವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಶ್ರೀಮಾತೆಯವರನ್ನು ಕೇಳಿಕೊಂಡ. ಆಗ ಶ್ರೀಮಾತೆ ಕಣ್ಣೀರಿಳಿಸುತ್ತಾ, "ನೀನಿನ್ನು ಮಂತ್ರಜಪ ಮಾಡಬೇಕಿಲ್ಲ. ಶ್ರೀರಾಮಕೃಷ್ಣರು ಎಂದೋ ನಿನ್ನ ಮೇಲೆ ದಯೆ ತೋರಿಸಿದ್ದಾರೆ" ಎಂದರು. ಅವರ ಮಾತಿನ ಅರ್ಥವನ್ನರಿಯದೆ, ಅವರು ಮಂತ್ರವನ್ನು ಹಿಂದಕ್ಕೆ ಪಡೆದರು ಎಂದೇ ತಿಳಿದುಕೊಂಡ ವೈಕುಂಠ, ಶ್ರೀಮಾತೆಯವರೊಂದಿಗೆ ತನ್ನ ಸಂಬಂಧವೆಲ್ಲವೂ ಕಡಿದುಹೋಯಿತೆಂದೇ ಭಾವಿಸಿದ. ಭಯ, ಆತಂಕಗಳಿಂದ ಅವನ ತಲೆ ತಿರುಗಲಾರಂಭಿಸಿತು. ಅವನು, "ಅಮ್ಮ, ಹಾಗಾದರೆ ನನ್ನ ಸರ್ವಸ್ವವನ್ನೂ ಕಸಿದು ಕೊಂಡಿರಾ? ನಾನೇನು ಮಾಡಲಿ? ಹಾಗಾದರೆ ನಾನು ರಸಾ ತಳಕ್ಕೆ ಇಳಿದುಹೋದೆನೇ, ಅಮ್ಮಾ?" ಎಂದು ಪ್ರಲಾಪಿಸಿದ.

ಅದನ್ನು ಕೇಳಿದ ಶ್ರೀಮಾತೆ ದೃಢಸ್ವರದಿಂದ, "ಏನು? ನನ್ನ ಮಗನಾಗಿ ನೀನು ರಸಾತಳಕ್ಕೆ ಇಳಿದು ಹೋಗುತ್ತೀಯಾ? ಇಲ್ಲಿಗೆ ಯಾರು ಬಂದಿದ್ದಾರೋ, ಯಾರು ನನ್ನ ಮಕ್ಕಳೋ, ಅವರಿಗೆ ಮುಕ್ತಿ ಲಭಿಸಿಯೇಬಿಟ್ಟಿದೆ! ನನ್ನ ಮಕ್ಕಳನ್ನು ರಸಾತಳಕ್ಕೆ ಎಸೆಯಲು ಬ್ರಹ್ಮನಿಗೂ ಸಾಧ್ಯವಿಲ್ಲ!" ಎಂದರು. ಅವರ ಮಾತುಗಳನ್ನು ಕೇಳಿದ ವೈಕುಂಠ ನಿಶ್ಚಿಂತನಾದ.

ಸಾಕ್ಷಾತ್ ಜಗನ್ಮಾತೆ ನೀಡಿದ ಭರವಸೆ ಇದು. ಭಗವಂತನಲ್ಲಿ ಶರಣಾದವನ ವಿಧಿಬರಹವೇ ಅಳಿಸಲ್ಪಡುತ್ತದೆ ಎಂದು ಶ್ರೀಮಾತೆಯವರು ಹೇಳಿದ್ದರು. ನಿಜವಾದ ಗುರು ಶಿಷ್ಯನ ಜವಾಬ್ದಾರಿಯನ್ನು ಹೊತ್ತುಕೊಂಡರೆ, ಶಿಷ್ಯನ ಸಾಕ್ಷಾತ್ಕಾರ ವಾಗುವ ತನಕವೂ ಅವನ ರಕ್ಷಣೆಯ ಹೊಣೆಯನ್ನು ಹೊತ್ತು ಕೊಳ್ಳುವನು. ಇದೇ ಅತ್ಯುನ್ನತ ಸ್ತರದ ಗುರು–ಶಿಷ್ಯ ಸಂಬಂಧ. ಈ ಹಿನ್ನೆಲೆಯಲ್ಲಿ ಎಷ್ಟೇ ಸ್ತುತಿ, ಸ್ತೋತ್ರ, ಪೂಜೆ, ಆರಾಧನೆಗಳಿಂದ ಶಿಷ್ಯನು ಗುರುವನ್ನು ಸ್ತುತಿಸಲಿ, ಗುರುವಿಗೆ ತನ್ನ ಋಣವನ್ನು ತೀರಿಸುವುದಂತೂ ಸಾಧ್ಯವಿಲ್ಲ; ಸಂಪೂರ್ಣವಾಗಿ ಗುರುವಿಗೆ ತನ್ನನ್ನು ಸಮರ್ಪಿಸಿಕೊಳ್ಳುವುದೊಂದೇ ಅವನು ಗುರುವಿಗೆ ನೀಡಬಹುದಾದ ಕಾಣಿಕೆ. ಅಷ್ಟಾಗಿಯೂ ಗುರು ತನ್ನ ಶಿಷ್ಯ ನಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಏಕೆಂದರೆ ನಿರ್ವ್ಯಾಜ ಕರುಣೆಯೇ ಶ್ರೇಷ್ಠ ಗುರುವಿನ ಆದರ್ಶ. ಈ ಎಲ್ಲ ಭಾವನೆ ಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆಚರಿಸುವ ಗುರುಪೂರ್ಣಿ ಮೆಯು ಎಲ್ಲ ಅರ್ಥಗಳಲ್ಲಿ, ಎಲ್ಲ ಹಂತಗಳಲ್ಲಿ ಗುರುವನ್ನು ಪೂಜಿಸುವ ಒಂದು ಪವಿತ್ರಕಾರ್ಯವೆನಿಸುವುದು. ಈ ಪವಿತ್ರ ದಿನ, ಗುರುಶಕ್ತಿಯ ಕೃಪಾಪ್ರವಾಹ ನಮ್ಮೆಡೆಗೆ ಹರಿದುಬರುವ ಶುಭಸಂದರ್ಭವಾಗಲಿ ಎಂದು ಪ್ರಾರ್ಥಿಸೋಣ. *



# ಶ್ರೀದಕ್ಷಿಣಾಮೂರ್ತಿ ಸ್ತೋತ್ರಮ್



ಶ್ರೀ ಶಂಕರಾಚಾರ್ಯ

ಸಂಸ್ಕೃತ ಸ್ತೋತ್ರಸಾಹಿತ್ಯದಲ್ಲಿ ಶ್ರೀಶಂಕರಾಚಾರ್ಯರು ರಚಿಸಿದ 'ಶ್ರೀದಕ್ಷಿಣಾಮೂರ್ತಿ ಸ್ತೋತ್ರ'ಕ್ಕೆ ವಿಶಿಷ್ಟ ಸ್ಥಾನವಿದೆ. ಅದ್ವೈತವೇದಾಂತದ ಉನ್ನತ ತತ್ತ್ವಗಳನ್ನೂ, ಕಾವ್ಯಸೌಂದರ್ಯವನ್ನೂ, ಭಗವಂತನ ಸ್ತುತಿಯನ್ನೂ ಸುಂದರವಾಗಿ ಮೇಳೈಸಿ ರಚಿಸಿದ ಈ ಕೃತಿಯು ಸ್ತೋತ್ರಕೃತಿಗಳ ಸರಳ ಶೈಲಿಯಲ್ಲಿಲ್ಲ; ತತ್ತ್ವವಿಚಾರಗಳನ್ನು ಗರ್ಭೀಕರಿಸಿಕೊಂಡಿರುವ ಗಂಭೀರ ಶೈಲಿಯಲ್ಲಿದೆ.

ಶಿವನ ಒಂದು ರೂಪವಾಗಿರುವ ದಕ್ಷಿಣಾಮೂರ್ತಿಯು ವಟವೃಕ್ಷದ ಅಡಿಯಲ್ಲಿ ಯೋಗಿಭಂಗಿಯಲ್ಲಿ ಕುಳಿತಿರುವಂತೆ ಇಲ್ಲಿ ಕಲ್ಪಿಸಲಾಗಿದೆ. ಜ್ಞಾನಕ್ಕೆ ಸಂಕೇತವಾಗಿರುವ ಚಿನ್ಮುದ್ರೆಯಿಂದ ಕೂಡಿ, ದಕ್ಷಿಣ ದಿಕ್ಕಿಗೆ ಅಭಿಮುಖವಾಗಿ ಕುಳಿತ ದಕ್ಷಿಣಾಮೂರ್ತಿಯು ಪಾರಮಾರ್ಥಿಕ ಜ್ಞಾನದ ಮೂರ್ತರೂಪನೂ, ಗುರುವಿನ ರೂಪವನ್ನು ತಳೆದ ಪರಮಾತ್ಮನೂ ಆಗಿದ್ದಾನೆ. ಮಾನವ ಗುರುಗಳ ಮೂಲಕ ಅಧ್ಯಾತ್ಮವಿದ್ಯೆಯನ್ನು ಜನರಿಗೆ ನೀಡುವ ಆದಿಗುರುವು ಭಗವಂತನೇ ಆಗಿರುವುದರಿಂದ, ಅವನನ್ನು ಅಧ್ಯಾತ್ಮ ಸಾಧಕರು ಗುರುರೂಪದಲ್ಲಿ ಕಾಣುತ್ತಾರೆ.

ಶ್ರೀಶಂಕರರ ಶಿಷ್ಯರಾದ ಸುರೇಶ್ವರರು ದಕ್ಷಿಣಾಮೂರ್ತಿಸ್ತೋತ್ರಕ್ಕೆ 'ಮಾನಸೋಲ್ಲಾಸ'ವೆಂಬ ವಾರ್ತಿಕವನ್ನು ರಚಿಸಿದ್ದಾರೆ. ವಾರ್ತಿಕವೆಂದರೆ ಕೃತಿಯಲ್ಲಿ ಹೇಳಿರುವ, ಹೇಳದ (ಅಂದರೆ ಸೂಚ್ಯವಾದ) ಮತ್ತು ತಪ್ಪಾದ ಅರ್ಥಗಳನ್ನು ಕುರಿತು ವಿಶ್ಲೇಷಿಸಿ ಬರೆದಿರುವ ವಿವರಣೆ. 'ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ' ಎಂದು ಕೊನೆಗೊಳ್ಳುವ ಹತ್ತು ಶ್ಲೋಕಗಳನ್ನು 'ದಕ್ಷಿಣಾಮೂರ್ತಿಸ್ತೋತ್ರ'ವೆಂದು ಕರೆಯುವುದು ವಾಡಿಕೆಯಾದರೂ, ಇದರೊಂದಿಗೆ ಇನ್ನೂ ಹೆಚ್ಚಿನ ಆರು ಶ್ಲೋಕಗಳನ್ನು ಸೇರಿಸಿಕೊಂಡು ಈ ಸ್ತೋತ್ರವನ್ನು ಹಾಡುವ, ವಾಚಿಸುವ ಪದ್ಧತಿ ಕಂಡುಬರುತ್ತದೆ. ದಕ್ಷಿಣಾಮೂರ್ತಿಯ, ಗುರುರೂಪೀ ಭಗವಂತನ ಮಹಿಮೆಯನ್ನು ಕೊಂಡಾಡುವ ಈ ಶ್ಲೋಕಗಳು ಮೂಲಸ್ತೋತ್ರದ ಘನತೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ. ಶ್ರೀದಕ್ಷಿಣಾಮೂರ್ತಿ ಸ್ತೋತ್ರವನ್ನು ಅದರ ಸರಳ ಅನುವಾದದೊಂದಿಗೆ ಇಲ್ಲಿ ನೀಡುತ್ತಿದ್ದೇವೆ.

**ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ**
**ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ।**
**ಯಸ್ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾತ್ಮಾನಮೇವಾದ್ವಯಂ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ**
**॥೧॥**

ಸ್ವಪ್ನದ ದೆಶೆಯಿಂದ ಆಂತರಿಕ ವಸ್ತುವು ಹೊರಗಡೆ ಕಾಣುವಂತೆ ಮಾಯೆಯ ಮುಖಾಂತರ ಎಲ್ಲವೂ ಹೊರಗಡೆ ವ್ಯಕ್ತವಾಗುವಂತೆ ಕಾಣಲ್ಪಟ್ಟರೂ, ತನ್ನಲ್ಲಿಯೇ ಅಂತರ್ಗತವಾದ ವಿಶ್ವವನ್ನು ಯಾವನು ಕನ್ನಡಿಯಲ್ಲಿ ಕಾಣುವ ನಗರದಂತೆ ತನ್ನಲ್ಲಿಯೇ ನೋಡುವನೋ, ಮತ್ತು ಪ್ರಬೋಧಕಾಲದಲ್ಲಿ ತನ್ನ ಅದ್ವಯವಾದ ಸ್ವರೂಪವನ್ನು ಯಾವನು ಸಾಕ್ಷಾತ್ತಾಗಿ ತಿಳಿಯುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಬೀಜಸ್ಯಾಂತರಿವಾಂಕುರೋ ಜಗದಿದಂ ಪ್ರಾಙ್ನಿರ್ವಿಕಲ್ಪಂ ಪುನ-**
**ರ್ಮಾಯಾಕಲ್ಪಿತದೇಶಕಾಲಕಲನಾವೈಚಿತ್ರ್ಯಚಿತ್ರೀಕೃತಮ್ ।**
**ಮಾಯಾವೀವ ವಿಜೃಂಭಯತ್ಯಪಿ ಮಹಾಯೋಗೀವ ಯಃ ಸ್ವೇಚ್ಛಯಾ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ**
**॥ ೨ ॥**

ಬೀಜದಲ್ಲಿ ಮೊಳಕೆ (ಅವ್ಯಕ್ತವಾಗಿ) ಇರುವ ಹಾಗೆ (ಸೃಷ್ಟಿಗೆ) ಪೂರ್ವದಲ್ಲಿ (ನಾಮರೂಪಗಳಿಲ್ಲದೆ) ನಿರ್ವಿಕಲ್ಪವಾಗಿದ್ದು ಪುನಃ (ಸೃಷ್ಟಿಕಾಲದಲ್ಲಿ) ಮಾಯೆಯಿಂದ ಕಲ್ಪಿತವಾದ ದೇಶ ಕಾಲಗಳ ಕಲ್ಪನೆಯಿಂದ ಚಿತ್ರವಿಚಿತ್ರವಾದ ಈ ಜಗತ್ತನ್ನು ಯಾವನು ತನ್ನ ಇಚ್ಛೆಗನುಗುಣವಾಗಿ ಮಾಯಾವಿಯ ಹಾಗೆ ಅಥವಾ ಮಹಾಯೋಗಿಯ ಹಾಗೆ ಕಾಣುವಂತೆ ಮಾಡುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಯಸ್ಯೈವ ಸ್ಫುರಣಂ ಸದಾತ್ಮಕಮಸತ್ಕಲ್ಪಾರ್ಥಕಂ ಭಾಸತೇ**
**ಸಾಕ್ಷಾತ್ತತ್ತ್ವಮಸೀತಿ ವೇದವಚಸಾ ಯೋ ಬೋಧಯತ್ಯಾಶ್ರಿತಾನ್।**
**ಯತ್ಸಾಕ್ಷಾತ್ಕರಣಾದ್ಭವೇನ್ನ ಪುನರಾವೃತ್ತಿರ್ಭವಾಂಭೋನಿಧೌ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ**
**॥ ೩ ॥**

ಯಾರ ಪ್ರಕಾಶವು ಸತ್ತ್ವರೂಪವಾಗಿದ್ದರೂ ಮಿಥ್ಯಾವಸ್ತುಗಳನ್ನು ಬೆಳಗಿಸುತ್ತದೆಯೋ, ಯಾರು 'ತತ್ತ್ವಮಸಿ' ಎಂಬ ಉಪನಿಷದ್ವಾಕ್ಯದ ಮೂಲಕ ಆಶ್ರಿತರಿಗೆ ಸಾಕ್ಷಾತ್ತಾಗಿ ಬೋಧಿಸುತ್ತಾನೆಯೊ, ಯಾರ ಸಾಕ್ಷಾತ್ಕಾರದಿಂದ ಸಂಸಾರಸಾಗರಕ್ಕೆ ಪುನಃ ಆಗಮನವಿಲ್ಲವೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ನಾನಾಛಿದ್ರಘಟೋದರಸ್ಥಿತಮಹಾದೀಪಪ್ರಭಾಭಾಸ್ವರಂ**
**ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಃ ಸ್ಪಂದತೇ ।**
**ಜಾನಾಮೀತಿ ತಮೇವ ಭಾಂತಮನುಭಾತ್ಯೇತತ್ಸಮಸ್ತಂ ಜಗತ್**

**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೪ ॥**

ಅನೇಕ ಕಂಡಿಗಳುಳ್ಳ ಪಾತ್ರೆಯ ಮಧ್ಯದಲ್ಲಿ ಇಟ್ಟಿರುವ ಉಜ್ವಲವಾದ ದೀಪದ ಪ್ರಭೆಯು ಎಲ್ಲೆಡೆ ಪ್ರಕಾಶಿಸುವ ಹಾಗೆ ಯಾರ ಜ್ಞಾನವು ಕಣ್ಣು ಮೊದಲಾದ ಇಂದ್ರಿಯಗಳ ಮುಖಾಂತರ ಹೊರಗಡೆ ಸ್ಪಂದಿಸುತ್ತದೆಯೋ, ಪ್ರಕಾಶಿಸುತ್ತಿರುವ ಯಾವನನ್ನು ಅನುಸರಿಸಿ ಈ ಸಮಸ್ತ ಜಗತ್ತೂ 'ನಾನು ತಿಳಿಯುತ್ತೇನೆ' ಎಂಬ ಜ್ಞಾನದಿಂದ ಬೆಳಗುತ್ತದೆಯೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ದೇಹಂ ಪ್ರಾಣಮಪೀಂದ್ರಿಯಾಣ್ಯಪಿ ಚಲಾಂ**
**ಬುದ್ಧಿಂ ಚ ಶೂನ್ಯಂ ವಿದುಃ**
**ಸ್ತ್ರೀಬಾಲಾಂಧಜಡೋಪಮಾಸ್ತ್ವಹಮಿತಿ**
**ಭ್ರಾಂತ್ಯಾ ಭೃಶಂ ವಾದಿನಃ ।**
**ಮಾಯಾಶಕ್ತಿವಿಲಾಸಕಲ್ಪಿತಮಹಾ-**
**ವ್ಯಾಮೋಹಸಂಹಾರಿಣೇ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥ ೫ ॥**

'ನಾನೇ ದೇಹ, ನಾನೇ ಪ್ರಾಣ, ನಾನೇ ಇಂದ್ರಿಯಗಳು, ನಾನೇ ಚಂಚಲವಾದ ಮನಸ್ಸು ಅಥವಾ ನಾನೇ ಶೂನ್ಯ' ಎಂದು ಯಾರು ತಿಳಿದುಕೊಂಡಿರುವರೋ ಅವರು ಸ್ತ್ರೀಯರಿಗೆ, ಮಕ್ಕಳಿಗೆ, ಕುರುಡರಿಗೆ, ಜಡರಿಗೆ ಸಮಾನರಾಗಿರುವರು; ಅವರು ಭ್ರಾಂತರೇ ಸರಿ. ಮಾಯಾಶಕ್ತಿಯ ವಿಲಾಸದಿಂದ ಕಲ್ಪಿತವಾದ ಇಂತಹ ಮಹಾವ್ಯಾಮೋಹವನ್ನು ನಾಶಮಾಡುವ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ರಾಹುಗ್ರಸ್ತದಿವಾಕರೇಂದುಸದೃಶೋ ಮಾಯಾಸಮಾಚ್ಛಾದನಾತ್**
**ಸನ್ಮಾತ್ರಃ ಕರುಣೋಪಸಂಹರಣತೋ ಯೋಽಭೂತ್**
**ಸುಷುಪ್ತಃ ಪುಮಾನ್ ।**
**ಪ್ರಾಗಸ್ವಾಪ್ಸಮಿತಿ ಪ್ರಬೋಧಸಮಯೇ ಯಃ ಪ್ರತ್ಯಭಿಜ್ಞಾಯತೇ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೬ ॥**

ರಾಹುಗ್ರಸ್ತನಾದ ಸೂರ್ಯನಂತೆ ಅಥವಾ ಚಂದ್ರನಂತೆ ಯಾವನು ಮಾಯೆಯಿಂದ ಆಚ್ಛಾದಿತನಾಗಿ ಇಂದ್ರಿಯಸಮೂಹಗಳನ್ನು ಒಳಕ್ಕೆ ಎಳೆದುಕೊಂಡ ನಂತರ ಗಾಢನಿದ್ರೆಯನ್ನು ಹೊಂದಿ ಸನ್ಮಾತ್ರರೂಪದಲ್ಲಿ ನೆಲೆಸುವನೋ, ಯಾವನು ಎಚ್ಚರವಾದ ಮೇಲೆ 'ನಾನೇ ಹಿಂದೆ ಮಲಗಿದ್ದೆನು' ಎಂದು ಜ್ಞಾಪಿಸಿಕೊಳ್ಳುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ**
**ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಃಸ್ಫುರಂತಂ ಸದಾ ।**
**ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ ಯೋ ಮುದ್ರಯಾ ಭದ್ರಯಾ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೭ ॥**

ಬಾಲ್ಯ-ಯೌವನ-ಮುಪ್ಪುಗಳು, ಜಾಗೃತ್-ಸ್ವಪ್ನ-ನಿದ್ರಾದಿಗಳು ಮತ್ತು ಇತರ ಎಲ್ಲ ಅವಸ್ಥೆಗಳು ಬಂದು ಹೋದರೂ, ನಿತ್ಯವಾಗಿ ಉಳಿದುಕೊಂಡಿರುವ ಮತ್ತು 'ನಾನು' ಎಂದು ಅಂತರಂಗದಲ್ಲಿ ಸದಾ ಪ್ರಕಾಶಿಸುತ್ತಿರುವ ಆತ್ಮನನ್ನು ಯಾವಾತನು ತನ್ನ ಮಂಗಳವಾದ ಮುದ್ರೆಯಿಂದ ಶಿಷ್ಯರಿಗೆ ಪ್ರಕಟಿಸುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ವಿಶ್ವಂ ಪಶ್ಯತಿ ಕಾರ್ಯಕಾರಣತಯಾ ಸ್ವಸ್ವಾಮಿಸಂಬಂಧತಃ**
**ಶಿಷ್ಯಾಚಾರ್ಯತಯಾ ತಥೈವ ಪಿತೃಪುತ್ರಾದ್ಯಾತ್ಮನಾ ಭೇದತಃ ।**
**ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ ಮಾಯಾಪರಿಭ್ರಾಮಿತಃ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೮ ॥**

ಯಾವನು ಮನುಷ್ಯನಂತೆ ಮಾಯೆಯಿಂದ ಮರುಳಾಗಿ ಸ್ವಪ್ನದಲ್ಲಿ ಅಥವಾ ಎಚ್ಚರವಾಗಿರುವಾಗ ಈ ವಿಶ್ವವನ್ನು ಕಾರ್ಯ ಕಾರಣ ರೂಪದಿಂದಲೂ, ಸ್ವತ್ತು-ಸ್ವಾಮಿ-ಸಂಬಂಧದಿಂದಲೂ, ಶಿಷ್ಯ-ಆಚಾರ್ಯ ರೂಪದಿಂದಲೂ, ಪಿತೃ-ಪುತ್ರಾದಿರೂಪದಿಂದಲೂ, ಭೇದದೃಷ್ಟಿಯಿಂದ ನೋಡುತ್ತಾನೆಯೋ, ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಭೂರಂಭಾಂಸ್ಯನಲೋಽನಿಲೋಽಂಬರಮಹ**
**ರ್ನಾಥೋ ಹಿಮಾಂಶುಃ ಪುಮಾನ್**
**ಇತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್।**
**ನಾನ್ಯತ್ಕಿಂಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾದ್ವಿಭೋಃ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೯ ॥**

ಯಾರ ಸ್ಥಾವರ-ಜಂಗಮಾತ್ಮಕವಾದ ಎಂಟು ಬಗೆಯುಳ್ಳ ರೂಪವು ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮ ಇವುಗಳಾಗಿ ಕಾಣುತ್ತದೆಯೋ, ವಿಚಾರಮಾಡುವವನ ಪಾಲಿಗೆ ಶ್ರೇಷ್ಠನೂ, ವ್ಯಾಪಕನೂ ಆದ ಯಾವನಿಗಿಂತ ಬೇರೊಂದು ವಸ್ತುವಿಲ್ಲವೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

**ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ ಯಸ್ಮಾದಮುಷ್ಮಿಂಸ್ತವೇ**
**ತೇನಾಸ್ಯ ಶ್ರವಣಾತ್ತದರ್ಥಮನನಾದ್ಧ್ಯಾನಾಚ್ಚ ಸಂಕೀರ್ತನಾತ್ ।**
**ಸರ್ವಾತ್ಮತ್ವಮಹಾವಿಭೂತಿಸಹಿತಂ ಸ್ಯಾದೀಶ್ವರತ್ವಂ ಸ್ವತಃ**
**ಸಿದ್ಧ್ಯೇತ್ತತ್ಪುನರಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್ ॥ ೧೦॥**

ಈ ಸ್ತವದಲ್ಲಿ ಸರ್ವಾತ್ಮರೂಪನಾದ ವಸ್ತುವನ್ನು ಸ್ಪಷ್ಟೀಕರಿಸಿದ್ದರಿಂದ ಇದರ ಶ್ರವಣ, ಅರ್ಥದ ಮನನ, ಧ್ಯಾನ ಮತ್ತು ಸಂಕೀರ್ತನೆ ಇವುಗಳ ಮೂಲಕ ಸರ್ವಾತ್ಮತ್ವದ ಮಹಾವಿಭೂತಿಯಿಂದ ಕೂಡಿದ ಈಶ್ವರತ್ವವೂ ಮತ್ತು ಅಣಿಮಾದಿ ಅಷ್ಟಸಿದ್ಧಿಗಳೂ ಲಭಿಸುತ್ತವೆ.

**ವಟವಿಟಪಿಸಮೀಪೇ ಭೂಮಿಭಾಗೇ ನಿಷಣ್ಣಂ**
**ಸಕಲಮುನಿಜನಾನಾಂ ಜ್ಞಾನದಾತಾರಮಾರಾತ್ ।**
**ತ್ರಿಭುವನಗುರುಮೀಶಂ ದಕ್ಷಿಣಾಮೂರ್ತಿದೇವಂ**
**ಜನನಮರಣದುಃಖಚ್ಛೇದದಕ್ಷಂ ನಮಾಮಿ ॥ ೧೧ ॥**